ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.29/2024

| | | | |
|---|---|---|---|
| ಹೆಸರು | : | ಗೋಪಿನಾಥ್ ವಿ | ಸಿ .ಡಬ್ಲ್ಯೂ :18 |
| ತಂದೆ ಹೆಸರು | : | ಟಿ ವೀರಕೆಂಪಯ್ಯ | ಪಿ .ಡಬ್ಲ್ಯೂ :7 |
| ವಯಸ್ಸು | : | 56 ವರ್ಷ | |
| ಉದ್ಯೋಗ | : | PI , VV puram Trafic station Bangalore | |
| ವಾಸಸ್ಥಳ | : | Bangalore. | |

ಸಾಕ್ಷಿಯನ್ನು ದಿಃ 22-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 28-01-2023 ರಿಂದ 16-02-2025 ರವರೆಗೆ ಗುಬ್ಬಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. .

ದಿಃ03-02-2024 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 17 ರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿರುತ್ತೇನೆ .

ಅದೇ ದಿನ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಕಚ್ಚಾ ನಕ್ಷೆ ತಯಾರಿಸಿದ್ದೇನೆ .

ನಾನು ಅನ್ಯ ಕರ್ತವ್ಯದಲ್ಲಿದ್ದ ಕಾರಣ ಮೃತ ಮೃತ ವ್ಯಕ್ತಿಯ ಶವ ತನಿಖೆ ಮಾಡಿಕೊಂಡು ವರದಿ ಸಲ್ಲಿಸಲು ಚಾಸಾ -17 ರವರಿಗೆ ನಿರ್ದೇಶಿಸಿದ್ದೇನೆ . ಅವರ ಶವ ತನಿಖೆ ಮಾಡಿ ಅದೇ ದಿನ ಸಂಜೆ ವರದಿ ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ .

ದಿಃ 05-02-2024 ತುಮಕೂರು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಪಿ ಎಂ ವರದಿ ಪಡೆದಿದ್ದೇನೆ .

ಅದೇ ದಿನ ಚಾಸಾ -1 ರಿಂದ 3 ರವರ ಹೇಳಿಕೆ ಪಡೆದಿದ್ದೇನೆ .

ದಿಃ 07-02-2024 ರಂದು ಚಾಸಾ -12 ರವರಿಗೆ ಐ ಎಂ ವಿ ಕಾಯ್ದೆ ಕಲಂ 133 ರಡಿಯಲ್ಲಿ ನೋಟಿಸ್ ನೀಡಿ ಉತ್ತರವನ್ನು ಪಡೆದುಕೊಂಡಿರುತ್ತೇನೆ .ಅವರು ಸದರಿ ಉತ್ತರದಲ್ಲಿ ಅಪಘಾತದ ದಿನ ಬಸ್ಸನ್ನು ಆರೋಪಿತರು ಚಲಾಯಿಸುತ್ತಿದ್ದರು ಎಂದು ತಿಳಿಸಿದ್ದು ಅವರೇ ಆರೋಪಿತರನ್ನು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ . ಆ ನಂತರ ಆರೋಪಿತರ ವಿರುದ್ದ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಮೀನಿನ ಮೂಲಕ ಬಿಡುಗಡೆ ಮಾಡಿರುತ್ತೇನೆ .

ಅದೇ ದಿನ ಚಾಸಾ -12 ರವರು ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಖುದ್ದಾಗಿ

ಹಾಜರುಪಡಿಸಿದ್ದು ಅವುಗಳನ್ನು ಪಡೆದು ಅಸಲು ದಾಖಲೆಯೊಡನೆ ಹೋಲಿಸಿ ನೋಡಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ.

ಅದೇ ದಿನ ಚಾಸಾ -12 ರವರಿಂದ ನಷ್ಟ ಭರ್ತಿ ಪರಿಹಾರ ಪತ್ರವನ್ನು ಪಡೆದು ವಾಹನವನ್ನು ಅವರ ವಶಕ್ಕೆ ನೀಡಿದ್ದೇನೆ .

ನಂತರ ತನಿಖೆ ಪೂರ್ಣಗೊಂಡಿದ್ದು ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ IPC ಕಲಂ 279 ಹಾಗೂ 304(A) ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ .

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ .

ಸಾಕ್ಷಿಗೆ ಸ್ಥಳದ ಕಚ್ಚಾ ನಕ್ಷೆ , ನಷ್ಟ ಭರ್ತಿ ಪರಿಹಾರ ಪತ್ರ, ಐ ಎಂ ವಿ ಕಾಯ್ದೆ ಕಲಂ 133 ರಡಿಯಲ್ಲಿ ನೀಡಲಾಗಿದ್ದ ನೋಟಿಸ್ ಮತ್ತು ಉತ್ತರ , ಆರೋಪಿತರ ಚಾಲನ ಪರವಾನಗಿ , ವಾಹನದ ಆರ್ ಸಿ ಮತ್ತು ವಿಮೆಯನ್ನು ತೋರಿಸಲಾಗಿ ಅವುಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ ಅವುಗಳನ್ನು ನಿಪಿ -8 ರಿಂದ 14 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ -8 (ಎ) ರಿಂದ 14 (ಎ) ಎಂದು ಗುರುತಿಸಲಾಯಿತು .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ಪ್ರಕರಣದ ಬಗ್ಗೆ ಸೂಕ್ತ ರೀತಿಯಲ್ಲಿ ತನಿಖೆ ನಡೆಸದೆ ಮೃತ ವ್ಯಕ್ತಿಯ ಕುಟುಂಬದವರಿಗೆ ಸಹಾಯವಾಗಲೆಂದು ದಾಖಲೆಗಳನ್ನು ಸೃಷ್ಟಿಸಿ ಸಲ್ಲಿಸಿದ್ದೇನೆ ಮತ್ತು ಈಗ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿತರ ತಪ್ಪಿನಿಂದ ಯಾವುದೇ ಅಪಘಾತ ನಡೆದಿಲ್ಲ , ಯಾರೋ ಮಾಡಿದ ಅಪಘಾತದ ಹೊಣೆಯನ್ನು ಆರೋಪಿತರ ಮೇಲೆ ಹೊರಿಸಲಾಗಿದೆ ಎಂದರೆ ಸರಿಯಲ್ಲ .

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.